60 to 64 yrs - 200
65 to 79 " - 400

ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ: ಇಂದಿರಾಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ಯೋಜನೆಯಡಿ ಉದ್ದೇಶಿತ ಫಲಾನುಭವಿಗಳ ವಯಸ್ಸನ್ನು 65 ರಿಂದ 60ಕ್ಕೆ ಇಳಿಸುವ ಕುರಿತು..

ಓದಲಾಗಿದೆ:- 1. ಸರ್ಕಾರಿ ಆದೇಶ ಸಂಖ್ಯೆ: ಕಂಇ 147 ಎಮ್‌ಎಸ್‌ಟಿ 2007, ದಿ: 01.12.2007
2. ಕಾರ್ಯದರ್ಶಿ, ಗ್ರಾಮೀಣಾಭಿವೃದ್ಧಿ ಮಂತ್ರಾಲಯ, ಭಾರತ ಸರ್ಕಾರ ಇವರ ಪತ್ರ ಸಂಖ್ಯೆ: ಎ-11015/1/2011-NSAP, ದಿ: 30.06.2011.
3. ಆರ್ಥಿಕ ಇಲಾಖೆಯ ಟಿಪ್ಪಣಿ ಸಂಖ್ಯೆ: ಆಇ 761 ವೆಚ್ಚ.7/2011, ದಿ: 03.11.2011.
4. ಸುತ್ತೋಲೆ ಸಂಖ್ಯೆ: ಆರ್‌ಡಿ 62 ಡಿಎಸ್‌ಪಿ 2009(1), ದಿ: 03.01.2012

**ಪ್ರಸ್ತಾವನೆ:**

ಮೇಲೆ ಓದಲಾದ ಉಲ್ಲೇಖ(2)ರನ್ವಯ, ಭಾರತ ಸರ್ಕಾರವು ಇಂದಿರಾಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನದಡಿ ಉದ್ದೇಶಿತ ಫಲಾನುಭವಿಗಳ ವಯೋಮಿತಿಯನ್ನು 65 ವರ್ಷಗಳಿಂದ 60 ವರ್ಷಗಳಿಗೆ ಇಳಿಸಲು ತೀರ್ಮಾನಿಸಿದೆ. ಭಾರತ ಸರ್ಕಾರವು ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ಯೋಜನೆಯಡಿ ಫಲಾನುಭವಿಗಳಿಗೆ ಮಾಸಿಕ 200 ರೂ.ಗಳಂತೆ ಪಿಂಚಣಿಯನ್ನು ನೀಡಲು ಅನುದಾನ ಒದಗಿಸುತ್ತಿದ್ದು, ರಾಜ್ಯಕ್ಕೆ ಯೋಜನೆಯಡಿ 60 ರಿಂದ 64 ವರ್ಷ ಪೂರ್ಣಗೊಂಡಿರುವ ಫಲಾನುಭವಿಗಳ ಸಂಖ್ಯೆಯನ್ನು 4,27,915 ಎಂದು ನಿಗದಿಪಡಿಸಿದೆ. ಆದರೆ ಭಾರತ ಸರ್ಕಾರವು 60 ರಿಂದ 64 ವರ್ಷ ಪೂರ್ಣಗೊಂಡಿರುವ 93290 ಫಲಾನುಭವಿಗಳು ನಿರ್ಗತಿಕ ವಿಧವಾ ವೇತನದಡಿ ಮತ್ತು 5968 ಫಲಾನುಭವಿಗಳು ಅಂಗವಿಕಲ ವೇತನ ಯೋಜನೆಯಡಿ ಈಗಾಗಲೇ ಪಿಂಚಣಿಯನ್ನು ಪಡೆಯುತ್ತಿದ್ದಾರೆ ಎಂದು ಅಂದಾಜಿಸಿರುವ ಹಿನ್ನಲೆಯಲ್ಲಿ ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನದಡಿ 60 ರಿಂದ 64 ವರ್ಷದೊಳಗಿನ ಹೊಸ ಫಲಾನುಭವಿಗಳನ್ನು 3,28,657ಕ್ಕೆ ಸೀಮಿತಗೊಳಿಸಬೇಕಿರುತ್ತದೆ. ಅದರಂತೆ, ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನದಡಿ ಇರುವ ವಯೋಮಿತಿಯನ್ನು 65 ವರ್ಷಗಳಿಂದ 60 ವರ್ಷಗಳಿಗೆ ಇಳಿಸಿ 60 ರಿಂದ 64 ವರ್ಷದೊಳಗಿನ ಫಲಾನುಭವಿಗಳಿಗೆ ಮಾಹೆಯಾನ 200 ರೂ. (ಎರಡು ನೂರು ರೂ.ಗಳು ಮಾತ್ರ) ಮಾಸಾಶನವನ್ನು ನಿಗದಿಪಡಿಸಲು ಸರ್ಕಾರ ತೀರ್ಮಾನಿಸಿರುವ ಹಿನ್ನಲೆಯಲ್ಲಿ ಕೆಳಕಂಡ ಆದೇಶವನ್ನು ಹೊರಡಿಸಲಾಗಿದೆ.

**ಸರ್ಕಾರಿ ಆದೇಶ ಸಂಖ್ಯೆ: ಕಂಇ 5 ಡಿಎಸ್‌ಪಿ 2012, ದಿನಾಂಕ:11-01-2012.**

1. ಇಂದಿರಾ ಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನದಡಿ ಉದ್ದೇಶಿತ ಫಲಾನುಭವಿಗಳ ವಯೋಮಿತಿಯನ್ನು 65 ವರ್ಷಗಳಿಂದ 60 ವರ್ಷಗಳಿಗೆ ಇಳಿಸಿದೆ.

   ಅನುಬಂಧದಲ್ಲಿ ಪ್ರತಿ ತಾಲ್ಲೂಕಿಗೆ ನಿಗದಿಪಡಿಸಿರುವಂತೆ 60 ರಿಂದ 64 ವರ್ಷದೊಳಗಿನ ಫಲಾನುಭವಿಗಳ ಸಂಖ್ಯೆಯನ್ನು ಸೀಮಿತಗೊಳಿಸತಕ್ಕದ್ದು. ಯೋಜನೆಯಡಿ ಉದ್ದೇಶಿತ ಫಲಾನುಭವಿಗಳು ಈಗಾಗಲೇ ನಿರ್ಗತಿಕ ವಿಧವಾ ವೇತನ ಮತ್ತು ಅಂಗವಿಕಲ ವೇತನ ಯೋಜನೆಯಡಿ ಪಿಂಚಣಿಯನ್ನು ಪಡೆಯುತ್ತಿರಬಾರದು. ಫಲಾನುಭವಿಗಳಿಗೆ ನೀಡಲಾಗುವ ಮಂಜೂರಾತಿ ಆದೇಶದ ಸಂಖ್ಯೆಯ ಮೊದಲು "OAP1" ಎಂದು ನಮೂದಿಸುವುದು.

2. 60 ರಿಂದ 64 ವರ್ಷದೊಳಗಿನ ಫಲಾನುಭವಿಗಳಿಗೆ ಮಾಹೆಯಾನ 200 ರೂ.ಗಳ (ಎರಡು ನೂರು ರೂ.ಗಳು ಮಾತ್ರ) ಪಿಂಚಣಿಯನ್ನು ನಿಗದಿಪಡಿಸಲಾಗಿದೆ.

3. 65 ರಿಂದ 79 ವರ್ಷದೊಳಗಿನ ಪಿಂಚಣಿದಾರರಿಗೆ (ಪೂರ್ಣಗೊಂಡ ವರ್ಷ), ರಾಜ್ಯ ಸರ್ಕಾರವು ಕೇಂದ್ರ ಸರ್ಕಾರ ನೀಡುವ ರೂ.200(ರೂ.ಇನ್ನೂರು ಮಾತ್ರ)ಗಳ ಅನುದಾನದೊಂದಿಗೆ ರೂ.200 (ರೂ.ಇನ್ನೂರು ಮಾತ್ರ) ಸೇರಿಸಿ ಮಾಹೆಯಾನ ಒಟ್ಟು 400 ರೂ.ಗಳ ಪಿಂಚಣಿಯನ್ನು ನೀಡಲಾಗುವುದು.

ಕ್ರಮ ಸಂಖ್ಯೆ 114/2011-12 ದಿ 24/01/2012

4. ಹೊಸ ಫಲಾನುಭವಿಗಳನ್ನು ಮೇಲೆ ಓದಲಾದ ಉಲ್ಲೇಖ (4)ರನ್ವಯ ಗುರುತಿಸತಕ್ಕದ್ದು.

ಇಂದಿರಾಗಾಂಧಿ ರಾಷ್ಟ್ರೀಯ ವೃದ್ಧಾಪ್ಯ ವೇತನದಡಿ ಫಲಾನುಭವಿಗಳನ್ನು ಗುರುತಿಸುವ ಇನ್ನುಳಿದ ಅರ್ಹತೆಯ ಮಾನದಂಡಗಳಲ್ಲಿ ಯಾವುದೇ ಬದಲಾವಣೆಗಳಿರುವುದಿಲ್ಲ.

(ಅಶೋಕ್ ಕುಮಾರ್ ಸಿ. ಮನೋಳಿ)
ಸರ್ಕಾರದ ಪ್ರಧಾನ ಕಾರ್ಯದರ್ಶಿ,
ಕಂದಾಯ ಇಲಾಖೆ.

ಇವರಿಗೆಃ

1. ಮಹಾಲೇಖಪಾಲರು (ಎ ಮತ್ತು ಇ), ಕರ್ನಾಟಕ, ಬೆಂಗಳೂರು.
2. ಮುಖ್ಯ ಕಾರ್ಯದರ್ಶಿಗಳು, ವಿಧಾನಸೌಧ, ಬೆಂಗಳೂರು.
3. ಮಾನ್ಯ ಮುಖ್ಯಮಂತ್ರಿಯವರ ಪ್ರಧಾನ ಕಾರ್ಯದರ್ಶಿಗಳು, ವಿಧಾನಸೌಧ.
4. ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು, ಆರ್ಥಿಕ ಇಲಾಖೆ, ವಿಧಾನಸೌಧ, ಬೆಂಗಳೂರು
5. ಸರ್ಕಾರದ ಕಾರ್ಯದರ್ಶಿಗಳು, ಮಹಿಳಾ ಮತ್ತು ಮಕ್ಕಳ ಕಲ್ಯಾಣ ಇಲಾಖೆ.
6. ಎಲ್ಲಾ ಪ್ರಾದೇಶಿಕ ಆಯುಕ್ತರುಗಳು.
7. ಎಲ್ಲಾ ಜಿಲ್ಲಾಧಿಕಾರಿಗಳು.
8. ನಿರ್ದೇಶಕರು. ಖಜಾನೆ ಇಲಾಖೆ.ಬೆಂಗಳೂರು.
9. ಎಲ್ಲಾ ಉಪ ವಿಭಾಗಧಿಕಾರಿಗಳು/ ಎಲ್ಲಾ ತಹಸೀಲ್ದಾರರುಗಳಿಗೆ.
10. ಎಲ್ಲಾ ಜಿಲ್ಲಾ ಖಜಾನೆ ಹಾಗೂ ಉಪ ಖಜಾನೆ ಅಧಿಕಾರಿಗಳು.
11. ಕರ್ನಾಟಕ ರಾಜ್ಯ ಪತ್ರ, ಬೆಂಗಳೂರು.
12. ಹೆಚ್ಚುವರಿ ಪ್ರತಿ ಮತ್ತು ಶಾಖಾ ರಕ್ಷಾ ಕಡತ.